ಕರ್ನಾಟಕ ಸರ್ಕಾರ
(ಸಿ.ಆರ್.ಪಿ.67)

ಹೇಳಿಕೆ ಹಾಳೆ
(ಆರ್.ಪಿ.ಸಂಖ್ಯೆ 57)
ನಮೂನೆ ಸಂಖ್ಯೆ 4

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್ ನ್ಯಾಯಾಧೀಶರ ನ್ಯಾಯಾಲಯ, ಹಾಸನ**

**ಸ್ಪೆಷಲ್ ಕೇಸ್ ನಂಬರ್ : 688/2022**

**ಪ್ರಾಸಾ- 1 ಚಾಸಾ- 1**

| | | |
|---|---|---|
| ಸಾಕ್ಷಿದಾರರ ಹೆಸರುಃ | : | ರುದ್ರಪ್ಪ |
| ತಂದೆಯ ಹೆಸರುಃ | : | ಪೂಜಾರಿ ಕೃಷ್ಣಪ್ಪ |
| ವಯಸ್ಸುಃ | : | 52 ವರ್ಷ |
| ಉದ್ಯೋಗಃ | : | ಪೇಯಿಂಟಿಂಗ್ ಕೆಲಸ |
| ವಾಸ | : | ಬೋವಿ ಕಾಲೋನಿ, ಕಲ್ಲಂಗೆರೆ |

**ಸಾಕ್ಷಿಯನ್ನು ಕರೆಸಿ ಪ್ರಮಾಣವಚನ ಬೋಧಿಸಿದ ದಿನಾಂಕ: 25-02-2026:**

**ಮುಖ್ಯ ವಿಚಾರಣೆಃ ಸರ್ಕಾರದ ಪರವಾಗಿ ಮಾನ್ಯ ವಿಶೇಷ ಅಭಿಯೋಜಕರಿಂದಃ**

ಚಾಸಾ-2 ನನ್ನ ಭಾವನ ಮಗಳು. ಚಾಸಾ-3 ನನ್ನ ಭಾವ ಮತ್ತು ಚಾಸಾ-2 ರವರ ತಂದೆ. ಚಾಸಾ-4 ನನ್ನ ತಂಗಿ ಹಾಗೂ ಚಾಸಾ-2 ರವರ ತಾಯಿ. ಕಾ.ಸಂ.ಒ.ಬಾಲಕನ ಪರಿಚಯವಿಲ್ಲ.

2.2020ರಲ್ಲಿ ಚಾಸಾ-2 ಎಲ್ಲಿ ಓದುತ್ತಿದ್ದಳೆಂದು ನನಗೆ ಗೊತ್ತಿಲ್ಲ. 2020ರಲ್ಲಿ ಆಕೆ ನಮ್ಮ ಮನೆಗೆ ಬಂದಿದ್ದಳು. ನಂತರ ಆಕೆ ನಮ್ಮ ಮನೆಯಿಂದ ಕಾಣೆಯಾಗಿದ್ದಳು. ಆ ಬಗ್ಗೆ ನಾನು ಚಾಸಾ-3 ಮತ್ತು 4 ರವರಿಗೆ ತಿಳಿಸಿದೆನು. ಒಂದು ದಿನ ಕಳೆದ ನಂತರ ನಾನು ಪೊಲೀಸರಿಗೆ ದೂರು ಕೊಟ್ಟೆನು. ಆ ದೂರಿನಲ್ಲಿ ನಾನು ಯಾರ ಮೇಲೂ ಅನುಮಾನ ಇದೆ ಎಂದು ಹೇಳಿಲ್ಲ, ಕಾಣೆಯಾಗಿದ್ದಾಳೆ ಎಂದು ಮಾತ್ರ ಹೇಳಿದ್ದೇನೆ. ನಾನು ನೀಡಿದ ದೂರನ್ನು ನೋಡಿದರೆ ಗುರುತಿಸುತ್ತೇನೆ. ಅದನ್ನು ಈಗ ನೋಡುತ್ತಿದ್ದು ನಿಪಿ-1 ಎಂದು ಸಾಕ್ಷಿಯ ರುಜುವನ್ನು ನಿಪಿ-1(ಎ) ಎಂದು ಗುರುತಿಸಲಾಯಿತು.

3.ದೂರುಕೊಟ್ಟ ನಂತರ ಪೊಲೀಸರು ನನ್ನ ಮನೆ ಬಳಿ ಬಂದಿಲ್ಲ. ಯಾವುದೇ ಪಂಚನಾಮೆ

ನಡೆಸಿಲ್ಲ. ಈಗ ತೋರಿಸಿದ ದಾಖಲೆಯಲ್ಲಿರುವ ರುಜು ನನ್ನದೆ. ಅದನ್ನು ನಿಪಿ-2 ಎಂದು ಸಾಕ್ಷಿಯ ರುಜುವನ್ನು ನಿಪಿ-2(ಎ) ಎಂದು ಗುರುತಿಸಲಾಯಿತು. ಈಗ ತೋರಿಸಿದ 2 ಫೋಟೋಗಳನ್ನು ನನ್ನ ಮನೆ ಬಳಿ ತೆಗೆದಿರುತ್ತಾರೆ. ಅವುಗಳನ್ನು ನಿಪಿ-3 ಮತ್ತು 4 ಎಂದು ಗುರುತಿಸಲಾಯಿತು. ಚಾಸಾ-2 ಎಷ್ಟು ದಿನಗಳ ನಂತರ ಪತ್ತೆಯಾಗಿದ್ದೆಂದು ನನಗೆ ಗೊತ್ತಿಲ್ಲ. ಚಾಸಾ-2 ಕಾಣೆಯಾದ ಒಂದು ವಾರದ ನಂತರ ಪೊಲೀಸರು ನಮ್ಮನ್ನು ಠಾಣೆಗೆ ಕರೆದಿದ್ದರು. ಅಲ್ಲಿ ಚಾಸಾ-2 ಇದ್ದರು, ಬೇರೆ ಯಾರೂ ಇರಲಿಲ್ಲ. ಆಕೆಯಲ್ಲಿ ಪೊಲೀಸರು ನಮ್ಮ ಸಮಕ್ಷಮದಲ್ಲಿ ಆಕೆ ಎಲ್ಲಿಗೆ ಹೋಗಿದ್ದೆಂದು ಕೇಳಿದಾಗ ತನ್ನ ಚಿಕ್ಕಮ್ಮನ ಮನೆಗೆ ಹೋಗಿದ್ದೆ ಎಂದು ಹೇಳಿದಳು, ಚಿಕ್ಕಮ್ಮನ ಹೆಸರು ಹೇಳಲಿಲ್ಲ. ಆಕೆಯನ್ನು ನ್ಯಾಯಾಲಯದ ಮುಂದಿರುವ  ಕಾ.ಸಂ.ಒ.ಬಾಲಕ ಮತ್ತು ಇತರರು ಅಪಹರಿಸಿಕೊಂಡು ಹೋಗಿದ್ದರು ಎಂದು ನಮ್ಮ ಮುಂದೆ ಹೇಳಲಿಲ್ಲ. ಹಾಗೆಯೇ ತನ್ನ ಇಚ್ಛೆಗೆ ವಿರುದ್ಧವಾಗಿ ಈ ಬಾಲಕ ತನ್ನ ಮೇಲೆ ದೈಹಿಕ ಸಂಪರ್ಕ ಬೆಳೆಸಿರುತ್ತಾನೆಂದು ನಮ್ಮ ಮುಂದೆ ಪೊಲೀಸರಿಗೆ ಹೇಳಿಲ್ಲ. ನಾನು ಪೊಲೀಸರಿಗೆ ಮುಂದುವರೆದ ಹೇಳಿಕೆ ಕೊಟ್ಟಿಲ್ಲ.

(ಈ ಹಂತದಲ್ಲಿ ಮಾನ್ಯ ವಿಶೇಷ ಅಭಿಯೋಜಕರು ಸಾಕ್ಷಿದಾರರನ್ನು ಪ್ರತಿಕೂಲ ಸಾಕ್ಷಿ ಎಂದು ಪರಿಗಣಿಸಿ ಪಾಟೀಸವಾಲು ಮಾಡಲು ಅನುಮತಿ ಕೋರುತ್ತಾರೆ, ಕಡತವನ್ನು ಪರಿಶೀಲಿಸಲಾಗಿ ಸಾಕ್ಷಿಯು ದಾಖಲೆಗೆ ವ್ಯತಿರಿಕ್ತವಾಗಿ ಸಾಕ್ಷ್ಯ ನುಡಿಯುವುದು ಕಂಡುಬರುತ್ತದೆ, ಆದ್ದರಿಂದ ಮಾನ್ಯ ವಿಶೇಷ ಅಭಿಯೋಜಕರ ಕೋರಿಕೆಯನ್ನು ಮನ್ನಿಸಿ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ, ಪಾಟೀಸವಾಲಿಗೆ ಒಳಪಡಿಸಲು ಅನುಮತಿ ನೀಡಲಾಗಿದೆ)

**ಪಾಟೀಸವಾಲುಃ ಸರ್ಕಾರದ ಪರ ಮಾನ್ಯ ವಿಶೇಷ ಅಭಿಯೋಜಕರಿಂದಃ**

ದಿನಾಂಕ 1-12-20ರಂದು ಪೊಲೀಸರು ನಮ್ಮ ಮನೆ ಬಳಿ ಬಂದಿದ್ದರು ಮತ್ತು ಅದೇ ಸಮಯದಲ್ಲಿ ಬರವಣಿಗೆ ಮಾಡಿಕೊಂಡಿದ್ದರು ಎಂದರೆ ಸರಿ. ದಿನಾಂಕ 15-12-20ರಂದು ಅರಸೀಕೆರೆ ಪೊಲೀಸರು ಚಾಸಾ-2 ರವರನ್ನು ಕರೆತಂದಿದ್ದೇವೆಂದು ತಿಳಿಸಿದ ಕಾರಣ ನಾನು, ಚಾಸಾ-3 ಮತ್ತು 4 ರವರು ಠಾಣೆಗೆ ಹೋದೆವು ಎಂದರೆ ನಿಜ. ಅಲ್ಲಿ ಚಾಸಾ-2 ರವರು ಠಾಣೆಯಲ್ಲಿದ್ದರು ಎಂದರೆ ನಿಜ. ಅಲ್ಲಿ ಆಕೆಯು ತನಗೆ ನ್ಯಾಯಾಲಯದ ಮುಂದಿರುವ  ಕಾ.ಸಂ.ಒ.ಬಾಲಕನು ತಾನು ಶಾಲೆಗೆ ಹೋಗುವಾಗ ಬಸ್ಸಿನಲ್ಲಿಓಡಾಡುತ್ತಿದ್ದಾಗ ಪರಿಚಯವಾಗಿದ್ದು ಒಬ್ಬರಿಗೊಬ್ಬರು ಪ್ರೀತಿಸುತ್ತಿದ್ದರು, ಆ ವಿಚಾರ ತಿಳಿದು ಆಕೆಯನ್ನು ನಮ್ಮ ಮನೆಯಲ್ಲಿ ಬಿಟ್ಟದ್ದು, ಆದರೂ ಕೂಡ ಆಕೆ ಆತನೊಂದಿಗೆ ಸಂಪರ್ಕದಲ್ಲಿದ್ದಳು, ನಂತರದಲ್ಲಿ  ಕಾ.ಸಂ.ಒ.ಬಾಲಕ ನಿನ್ನ ತಂದೆ ತಾಯಿ ನಮ್ಮಿಬ್ಬರನ್ನು

ಮದುವೆಯಾಗಲು ಬಿಡುವುದಿಲ್ಲ, ಎಲ್ಲಿಯಾದರೂ ಓಡಿಹೋಗಿ ಮದುವೆಯಾಗೋಣ ಎಂದು ಹೇಳಿ ಆಕೆಯನ್ನು ಹೊಸದುರ್ಗಕ್ಕೆ ಬರುವಂತೆ ತಿಳಿಸಿದನು ಎಂದು ಹೇಳಿದಳು ಎಂದರೆ ಸರಿಯಲ್ಲ. ಅದರಂತೆ ದಿಃ1-12-20ರಂದು ಮಧ್ಯಾಹ್ನ 2ವರೆ ಗಂಟೆಗೆ ಆಕೆ ಹೊಸದುರ್ಗಕ್ಕೆ ಹೋದಳು, ಅಲ್ಲಿ ಈ ಕಾ.ಸಂ.ಒ.ಬಾಲಕ ಇದ್ದು ಆತನು ಆಕೆಯನ್ನು ಮೆಣಸಿನ ನಡು ಬೋವಿ ಕಾಲೋನಿ ಎಂಬ ಹಳ್ಳಿಗೆ ಕರೆದುಕೊಂಡು ಹೋದನು ನಂತರ ಆತ ಮತ್ತು ಆತನ ಸಂಬಂಧಿಕರಾದ ಮಂಜುನಾಥ ವಿಶ್ವನಾಥ ಯಲ್ಲಪ್ಪರವರು ಸೇರಿ ಯಲ್ಲಮ್ಮ ದೇವಸ್ಥಾನದ ಮುಂದೆ ಆಕೆಯ ಕೊರಳಿಗೆ ಅರಿಶಿನದಾರ ಕಟ್ಟಿ ಮದುವೆ ಮಾಡಿಸಿದರು ಎಂದು ತಿಳಿಸಿದಳು ಎಂದರೆ ಸರಿಯಲ್ಲ. ನಂತರ ಆಕೆಯನ್ನು ಆತನು ಸಿದ್ದಮ್ಮ ಎಂಬುವವರ ಮನೆಗೆ ಕರೆದುಕೊಂಡು ಹೋಗಿ ಅಲ್ಲಿ ಪ್ರತಿದಿನ ಆಕೆಯ ಮೇಲೆ ದೈಹಿಕ ಸಂಪರ್ಕ ಬೆಳೆಸಿದ್ದನು ಎಂದು ತಿಳಿಸಿದಳು ಎಂದರೆ ಸರಿಯಲ್ಲ. ನಂತರ ದೂರು ಕೊಟ್ಟಿರುವ ವಿಚಾರ ತಿಳಿದು ಸದರಿ ಮಂಜುನಾಥ ಈಕೆಯ ಕೊರಳಲ್ಲಿದ್ದ ಅರಿಶಿನದಾರವನ್ನು ತೆಗೆದುಹಾಕಿ ಅರಸೀಕೆರೆಗೆ ಕರೆದುಕೊಂಡು ಬಂದು ಪೊಲೀಸ್ ಠಾಣೆಗೆ ಹೋಗು ಎಂದು ಹೊರಟುಹೋದರು ಎಂದು ಹೇಳಿರುತ್ತಾಳೆ ಎಂರೆಸರಿಯಲ್ಲ. ಈ ಎಲ್ಲಾ ವಿಚಾರವಾಗಿ ನಾನು ಪೊಲೀಸರ ಮುಂದೆ ಈಗ ಓದಿ ಹೇಳಿದಂತೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸಾಕ್ಷಿಗೆ ಓದಿ ಹೇಳಿದ ಸದರಿ ಹೇಳಿಕೆಯ ಭಾಗವನ್ನು ನಿಪಿ-5 ಎಂದು ಗುರುತಿಸಲಾಯಿತು. ಕೇಸಿನ ವಿಷಯ ಗೊತ್ತಿದ್ದು ಆ ಬಗ್ಗೆ ನಿಪಿ-5 ರಂತೆ ಹೇಳಿಕೆ ನೀಡಿದ್ದರೂ ಈಗ ಅವರಿಬ್ಬರೂ ಜೊತೆಯಲ್ಲಿದ್ದು ಸಂಸಾರ ಮಾಡುತ್ತಿದ್ದಾರೆ ಎಂಬ ಕಾರಣಕ್ಕೋಸ್ಕರ ಹಾಗೂ ಕಾ.ಸಂ.ಒ.ಬಾಲಕನಿಗೆ ಸಹಾಯ ಮಾಡುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. (ನಿಪಿ-1 ರಿಂದ 5ನ್ನು ಹಾಸನದ FTSC No.1 ನ್ಯಾಯಾಲಯದಲ್ಲಿ ನಡೆದ ಸ್ಪೆಷಲ್ ಕೇಸ್ ನಂಬರ್ 102/21ರಿಂದ ತರಿಸಿಕೊಳ್ಳಲಾಗಿದೆ, ಇವುಗಳ ದೃಢೀಕೃತ ನಕಲುಗಳನ್ನು ಈ ಕಡತದಲ್ಲಿರಿಸಿ ಮೂಲ ದಾಖಲೆಗಳನ್ನು ಸದರಿ ಕಡತಕ್ಕೆ ಹಿಂದಿರುಗಿಸಲು ಸೂಚಿಸಲಾಗಿದೆ)

**<u>ಪಾಟೀಸವಾಲುಃ ಕಾ.ಸಂ.ಒ.ಬಾಲಕನ ಪರ ವಕೀಲರಿಂದಃ</u>**

ಇಲ್ಲವೆಂದು ಹೇಳುತ್ತಾರೆ.

ಮರು ವಿಚಾರಣೆಃ ಇಲ್ಲ

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು)

**ಓ.ಹೇ.ಕೇ.ಸ.ಇದೆ.**

**ಪ್ರಧಾನ ಜಿಲ್ಲಾ ಮತ್ತು ಸೆಷನ್ಸ್ ಹಾಗೂ ಸ್ಪೆಷಲ್**

**ನ್ಯಾಯಾಧೀಶರು, ಹಾಸನ.**